## ಕರ್ನಾಟಕ ಸರ್ಕಾರ

ಗ್ರಾಅಪ 364 ಗ್ರಾಪಂಅ 2014

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ: 12-06-2014.

## ಸುತ್ತೋಲೆ

ವಿಷಯ: ಮಹಿಳೆಯರಿಗಾಗಿ ವಿಶೇಷ ಗ್ರಾಮ ಸಭೆಗಳನ್ನು ಕಡ್ಡಾಯವಾಗಿ ನಡೆಸುವ ಬಗ್ಗೆ.

ಉಲ್ಲೇಖ: ಸರ್ಕಾರದ ಪ್ರಧಾನ ಕಾರ್ಯದರ್ಶಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಇಲಾಖೆ ರವರ ಅ.ಸ. ಪತ್ರ ಸಂಖ್ಯೆ: ಮಮಇ 63 ಮಮಅ 2014 ದಿ:06-05-2014.

****

ಉಲ್ಲೇಖ (1) ರ ಸರ್ಕಾರದ ಪ್ರಧಾನ ಕಾರ್ಯದರ್ಶಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಇಲಾಖೆ ರವರ ಅರೆ ಸರ್ಕಾರಿ ಪತ್ರದಲ್ಲಿ ರಾಜ್ಯದಲ್ಲಿರುವ ಎಲ್ಲಾ ಗ್ರಾಮ ಪಂಚಾಯತಿಗಳಲ್ಲಿ ಸಾಮಾನ್ಯ ಗ್ರಾಮ ಸಭೆಗಳನ್ನು ನಡೆಸುತ್ತಿದ್ದು, ಈ ಮಾದರಿಯಲ್ಲಿ ಪ್ರತ್ಯೇಕವಾಗಿ ಮಹಿಳೆಯರಿಗೆ ಅವರ ಸವಲತ್ತುಗಳನ್ನು ನಿಯಮಿತವಾಗಿ ಪಡೆದುಕೊಳ್ಳಲು ಹಾಗೂ ವಿವಿಧ ಅಭಿವೃದ್ಧಿ ಇಲಾಖೆಗಳ ಯೋಜನೆಗಳಲ್ಲಿ ಸೂಕ್ತ ಮಹಿಳಾ ಫಲಾನುಭವಿಗಳನ್ನು ಆಯ್ಕೆ ಮಾಡಲು ಅನುಕೂಲವಾಗುವ ದೃಷ್ಟಿಯಿಂದ ವಿಶೇಷ ಗ್ರಾಮ ಸಭೆಗಳನ್ನು ನಡೆಸಲು ಅವಕಾಶ ಕಲ್ಪಿಸಲಾಗುವುದೆಂದು 2014-15 ಸಾಲಿನ ಆಯವ್ಯಯದಲ್ಲಿ ಘೋಷಿಸಲಾಗಿದೆ.

ಮುಂದುವರೆದು, ಮಹಿಳೆಯರ ರಾಜಕೀಯ ನಾಯಕತ್ವ, ಲಿಂಗ ಸಮಾನತೆ, ಮಹಿಳಾ ಫಲಾನುಭವಿಗಳನ್ನು ಸೂಕ್ತವಾಗಿ ಆಯ್ಕೆ ಮಾಡಲು ಮತ್ತು ಚುನಾಯಿತ ಮಹಿಳಾ ಪ್ರತಿನಿಧಿಗಳ ಸಾಮರ್ಥ್ಯವನ್ನು ಹೆಚ್ಚಿಸುವ ಹಾಗೂ ವಿವಿಧ ಯೋಜನೆಗಳಲ್ಲಿ ಅವರುಗಳನ್ನು ತೊಡಗಿಸಿಕೊಳ್ಳುವ ಸಲುವಾಗಿ ವಿಷಯವನ್ನು ಆಧ್ಯತೆಯ ಮೇರೆಗೆ ಗ್ರಾಮ ಸಭೆಯಲ್ಲಿ ಮಂಡಿಸಿ ಸೂಕ್ತ ನಿರ್ಣಯವನ್ನು ತೆಗೆದುಕೊಂಡು ಸಂಬಂಧಪಟ್ಟ ಮಹಿಳಾ ಪ್ರತಿನಿಧಿಗಳಿಗೆ ಸೂಕ್ತ ತಿಳುವಳಿಕೆ ನೀಡುವ ಅವಶ್ಯಕತೆ ಇರುತ್ತದೆ. ಸಾಮಾನ್ಯ ಗ್ರಾಮ ಸಭೆಯ ಮಾದರಿಯಲ್ಲಿ ಮಹಿಳೆಯರಿಗೆಂದೇ ವಿಶೇಷ ಗ್ರಾಮ ಸಭೆಗಳನ್ನು ಕಡ್ಡಾಯವಾಗಿ ಹಾಗೂ ಅತ್ಯಂತ ಜರೂರಾಗಿ ಜರುಗಿಸಲು ಕೋರಿರುತ್ತಾರೆ.

ಆದುದರಿಂದ, ಮಹಿಳೆಯರಿಗಾಗಿ ವಿಶೇಷ ಗ್ರಾಮ ಸಭೆಗಳನ್ನು ಕಡ್ಡಾಯವಾಗಿ ನಡೆಸುವ ಬಗ್ಗೆ ಕ್ರಮ ವಹಿಸುವಂತೆ ಎಲ್ಲಾ ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ, ಎಲ್ಲಾ ತಾಲ್ಲೂಕು ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಹಾಗೂ ಎಲ್ಲಾ ಗ್ರಾಮ ಪಂಚಾಯತಿಯ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಿಗೆ ಸೂಚಿಸಲಾಗಿದೆ. ಮಹಿಳೆಯರು ಯಾವ ಯಾವ ಸವಲತ್ತುಗಳನ್ನು ಪಡೆಯಬಹುದು ಎಂಬ ವಿವರಗಳನ್ನು ಅನುಬಂಧದಲ್ಲಿ ಈ ಸುತ್ತೋಲೆಗೆ ಲಗತ್ತಿಸಿದೆ.

12/06/14

(ಎಲ್.ಸಿ. ಬಸವರಾಜು)
ಸರ್ಕಾರದ ಅಧೀನ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

ಗೆ:

1) ಎಲ್ಲಾ ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.
2) ಎಲ್ಲಾ ತಾಲ್ಲೂಕು ಪಂಚಾಯತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳು.
3) ರಾಜ್ಯದ ಎಲ್ಲಾ ಗ್ರಾಮ ಪಂಚಾಯಿತಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು
4) ಸಂಪಾದಕರು, ಕರ್ನಾಟಕ ವಿಕಾಸ ಪತ್ರಿಕೆ/ವೆಬ್‌ಸೈಟ್, ಗ್ರಾ.ಅ ಮತ್ತು ಪಂ.ರಾಜ್ ಇಲಾಖೆ.
5) ಶಾಖಾ ರಕ್ಷ ಕಡತ/ಹೆಚ್ಚುವರಿ ಪ್ರತಿ.

ಪ್ರತಿ:

1. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು.
2. ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಇಲಾಖೆ ಸಚಿವರ ಆಪ್ತ ಕಾರ್ಯದರ್ಶಿಗಳು.
3. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಇಲಾಖೆ ರವರಿಗೆ ಮಾಹಿತಿಗಾಗಿ

## ಅನುಬಂಧ

### I. ಪೌಷ್ಟಿಕತೆಯ ಬಗ್ಗೆ :

1) **ಮಹಿಳೆಯರ ಪೌಷ್ಟಿಕತೆಯ ಬಗ್ಗೆ ಚರ್ಚಿಸುವುದು, ಗ್ರಾಮೀಣ ಮಹಿಳೆಯರು ಮತ್ತು ಮಕ್ಕಳಲ್ಲಿ ಅಪೌಷ್ಟಿಕತೆ ಕಡಿಮೆ ಮಾಡುವುದು:** ಅಂಗನವಾಡಿ ಹಾಗೂ ಶಾಲೆಗಳಲ್ಲಿ ಲಭ್ಯವಿರುವ ಪೂರಕ ಪೌಷ್ಟಿಕ ಆಹಾರದ ಸೇವೆಗಳನ್ನು ಸರ್ಮಪಕವಾಗಿ ಬಳಸಿಕೊಳ್ಳುವುದರ ಜೊತೆಗೆ ಸ್ಥಳೀಯವಾಗಿ ದೊರೆಯುವ ಆಹಾರ ಪದಾರ್ಥಗಳಲ್ಲಿರುವ ಪೌಷ್ಟಿಕಾಂಶಗಳ ಕುರಿತು ಮನವರಿಕೆ ಮಾಡಿಕೊಡುವುದು ಹಾಗೂ ಪ್ರಮುಖ ಪೌಷ್ಟಿಕಾಂಶಗಳ ಕೊರತೆಯಿಂದ ಎದುರಿಸಬೇಕಾದ ಆರೋಗ್ಯ ಸಮಸ್ಯೆಗಳು ಮತ್ತು ರಕ್ತಹೀನತೆಯಂತಹ ಸಮಸ್ಯೆಗಳ ಬಗ್ಗೆ ಕಿಶೋರಿಯರಿಗೆ ಹಾಗೂ ಮಹಿಳೆಯರಿಗೆ ಅರಿವು ಮೂಡಿಸಬೇಕಾಗಿರುತ್ತದೆ.

2) **ಮಹಿಳೆಯರ ಆರೋಗ್ಯ ಸುಧಾರಣೆ:–** ಮಹಿಳೆಯರ ಮತ್ತು ಮಕ್ಕಳ ಆರೋಗ್ಯ ಸೂಚ್ಯಂಕಗಳಾದ ತಾಯಂದಿರ ಮರಣದರ, ಶಿಶು ಮರಣದರವನ್ನು ಈ ಕೆಳಕಂಡ ಅಂಶಗಳಿಗೆ ಒತ್ತು ನೀಡುವುದರಿಂದ ಕಡಿಮೆಗೊಳಿಸಬಹುದಾಗಿರುತ್ತದೆ. ಸಾಂಸ್ಥಿಕ ಹೆರಿಗೆಗಳ ಪ್ರಮಾಣದಲ್ಲಿ ಹೆಚ್ಚಳ, ಮಹಿಳೆಯರಲ್ಲಿ ರಕ್ತಹೀನತೆಯ ಪ್ರಮಾಣ ತಗ್ಗಿಸುವುದು, ಗರ್ಭಿಣಿ ಹಾಗೂ ಬಾಣಂತಿಯರ ಆರೋಗ್ಯಕ್ಕೆ ಸಂಬಂಧಿಸಿದಂತೆ ಲಭ್ಯವಿರುವ ಎಲ್ಲಾ ಸೇವೆಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳುವುದು.

3) **ಮಹಿಳೆ ಮತ್ತು ಕಾನೂನು ವಿಷಯಗಳ ಬಗ್ಗೆ ಅರಿವು ಮೂಡಿಸುವುದು:** ಎಲ್ಲಾ ಸಮಸ್ಯೆಗಳಿಂದ ಮಹಿಳೆಯರನ್ನು ಮುಕ್ತಿಗೊಳಿಸುವುದಕ್ಕಾಗಿಯೇ ಸರ್ಕಾರವು ಹಲವಾರು ಕಾನೂನುಗಳನ್ನು ಜಾರಿಗೆ ತಂದಿದೆ. ಅವರಿಗಾಗಿ ಕಾನೂನಿನಲ್ಲಿ ವಿಶೇಷ ಸವಲತ್ತನ್ನು ನೀಡಿದೆ. ಸ್ತ್ರೀ–ಪುರುಷರಿಗೆ ಸಮಾನ ಕೆಲಸಕ್ಕೆ ಸಮಾನ ವೇತನ ನೀಡುವುದು, ವರದಕ್ಷಿಣೆ ನಿಷೇಧ ಅದಿನಿಯಮ 1961, ಮಹಿಳೆಯರ ಮೇಲಿನ ದೌರ್ಜನ್ಯ, ಸ್ತ್ರೀ ಭ್ರೂಣ ಹತ್ಯೆ, ಲೈಂಗಿಕ ಕಿರುಕುಳ, ದುಡಿಯುವ ಮಹಿಳೆಯರಿಗಾಗಿ ಇರುವ ಕನಿಷ್ಠ ಮಜೂರಿ ಪಡೆಯುವ ಹಕ್ಕು, ಬಾಲ್ಯ ವಿವಾಹ ನಿಷೇಧ ಕಾಯ್ದೆ 2006, ಹಿಂದೂ ವಿವಾಹ ಕಾಯ್ದೆ ಮುಂತಾದವುಗಳಲ್ಲಿ ಮಹಿಳೆಯರಿಗೆ ಇರುವ ಪರಿಹಾರದ ಬಗ್ಗೆ ಅರಿವು ಮೂಡಿಸುವುದು.

4) **ಕೌಟುಂಬಿಕ ದೌರ್ಜನ್ಯ ತಡೆಗಟ್ಟುವುದು:** ಸಮಾಜದಲ್ಲಿ ಕೌಟುಂಬಿಕ ದೌರ್ಜನ್ಯ ತುಂಬ ಅಪಾಯಕರ ಹಾಗೂ ದ್ರೋಹದ ಮಾದರಿಯ ಹಿಂಸೆಯಾಗಿದೆ. ಕೌಟುಂಬಿಕ ದೌರ್ಜನ್ಯವನ್ನು ಕಾಯ್ದೆಯ ವ್ಯಾಪ್ತಿಗೆ ಒಳಪಡಿಸಿರುವುದರಿಂದ ಇದು ದೌರ್ಜನ್ಯಕ್ಕೆ ಒಳಗಾದ ಮಹಿಳೆಯರಿಗೆ ತುರ್ತಾಗಿ ಪರಿಹಾರ ಒದಗಿಸುವುದಲ್ಲದೇ ಇವರ ಪರವಾಗಿ ಕೆಲಸ ಮಾಡುವ ಸ್ವಯಂ ಸೇವಾ ಸಂಸ್ಥೆಗಳಿಗೂ ಈ ಕಾಯ್ದೆ ರಕ್ಷಣೆ ನೀಡುತ್ತದೆ. ಮಹಿಳೆಯರ ಅಸಹಾಯಕತೆಯನ್ನು ದುರುಪಯೋಗ ಪಡಿಸಿಕೊಳ್ಳುವ ಪ್ರವೃತ್ತಿಗೆ ಈ ಮಸೂದೆ ಕಡಿವಾಣ ಹಾಕುತ್ತದೆ.

5) **ಮಹಿಳೆಯರ ಸಬಲೀಕರಣ:**

ಅ) **ಆರ್ಥಿಕ ಸಬಲೀಕರಣ:** ಮಹಿಳಾ ಉದ್ದೇಶಿತ ಆಯವ್ಯಯವು ಲಿಂಗತ್ವ ಸಮಾನತೆ ಮತ್ತು ಮಹಿಳೆಯರ ಸಬಲೀಕರಣವನ್ನು ಸಾಧಿಸುವ ನಿಟ್ಟಿನಲ್ಲಿ ಪ್ರಮುಖ ಹೆಜ್ಜೆಯಾಗಿರುತ್ತದೆ. ಆಯವ್ಯಯದ ಹಣಕಾಸು ನಿಗಧಿಯಲ್ಲಿ ಮಾತ್ರವಲ್ಲದೇ ವಿವಿಧ ಯೋಜನೆಗಳು ಮತ್ತು ಕಾರ್ಯಕ್ರಮಗಳಲ್ಲಿ ವೆಚ್ಚ ಮಾಡಲಾಗುವ ಸಂಪನ್ಮೂಲಗಳಲ್ಲಿ ಮಹಿಳೆಯರು ಮತ್ತು ಪುರುಷರಿಗೆ

ಸಲ್ಲಬೇಕಾದ ಪಾಲು ಸಿಗುವಂತೆ ಖಾತರಿ ಪಡಿಸಲು ಲಿಂಗಾಧಾರಿತ ಆಯವ್ಯಯವನ್ನು ಅನುಸರಿಸ ಲಾಗುತ್ತಿದೆ. ಸಂಪೂರ್ಣವಾಗಿ ಶೇ.100 ರಷ್ಟು ಅನುದಾನ ಮಹಿಳೆಯರಿಗಾಗಿ ಮಿಸಲಾಗಿರುವ ಯೋಜನೆಗಳನ್ನು "ಎ" ವರ್ಗದ ಯೋಜನೆಗಳೆಂದು, ಕನಿಷ್ಠ ಶೇ.30 ರಷ್ಟು ಅನುದಾನ ಮೀಸಲಾಗಿರುವ ಯೋಜನೆಗಳನ್ನು "ಬಿ" ವರ್ಗದ ಯೋಜನೆಗಳೆಂದು ವರ್ಗೀಕರಿಸಲಾಗಿದೆ.

ಆ) <u>ಮಹಿಳೆಯರ ಸಾಮಾಜಿಕ ಸಬಲೀಕರಣ, ಮೂಲಭೂತ ಸೌಕರ್ಯಗಳನ್ನು ಒದಗಿಸುವುದು:</u> ಪ್ರತಿ ಗ್ರಾಮ ಸಭೆಯಲ್ಲಿಯೂ ಮಹಿಳೆಯರು ಹಾಗೂ ಹೆಣ್ಣು ಮಕ್ಕಳ ಪರಿಸ್ಥಿತಿಯ ಕುರಿತು ಕಡ್ಡಾಯವಾದ ಕಾರ್ಯಸೂಚಿ ಇರುವಂತೆ ನೋಡಿಕೊಳ್ಳಬೇಕು, ಅಲ್ಲದೇ ಮಹಿಳೆಯರ ಸ್ಥಿತಿಗತಿಗಳನ್ನು ಉತ್ತಮಪಡಿಸುವಂತಹ ಸೂಕ್ತ ನಿರ್ಣಯ ಕೈಗೊಳ್ಳಬೇಕು. ಮಹಿಳೆಯರ ಬೆಳವಣಿಗೆಗೆ ಅಡ್ಡಿಯಾಗುವ ಸಾಮಾಜಿಕ, ಸಂಸ್ಕೃತಿಕ ಅಡೆ ತಡೆಗಳನ್ನು ಹೊಗಲಾಡಿಸಲು ಅಭಿವೃದ್ಧಿ ಇರುವ ವಿವಿಧ ಅವಕಾಶಗಳಲ್ಲಿ ಲಿಂಗತ್ವ ಆಧಾರಿತ ಆಯವ್ಯಯ ಹಾಗೂ ಅನುದಾನ ಮಿಸಲಿಟ್ಟಿರುವುದನ್ನು ಖಾತ್ರಿಪಡಿಸಿಕೊಳ್ಳಬೇಕು. ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ನಡೆಯುವ ವಿವಿಧ ಅಭಿವೃದ್ಧಿ ಕಾಮಗಾರಿ/ಕಾರ್ಯಕ್ರಮಗಳಿಗೆ (ಸಂಪೂರ್ಣ ಸ್ವಚ್ಚತಾ ಆಂದೋಲನ, ಸಾಕ್ಷರತೆ, ಕುಡಿಯುವ ನೀರಿನ ಯೋಜನೆ, ಸ್ವಯಂ ಸೇವಾ ಕಾರ್ಮಿಕರು, ಹಣ ಮತ್ತು ವಸತಿ ರೂಪದಲ್ಲಿ ವಂತಿಕೆ) ಒದಗಿಸಬೇಕು.

ಇ) <u>ರಾಜಕೀಯ ಸಬಲೀಕರಣ:</u> ಭಾರತದ ಸಂವಿಧಾನವು ಪರಿಚ್ಛೇದ 14, 15, 23, 29, 30, 42, 45 ರಲ್ಲಿ ಮಹಿಳಾ ಸಮಾನತೆಯನ್ನು ಖಾತ್ರಿಪಡಿಸಿದ್ದರೂ, ಭಾರತೀಯ ಮಹಿಳೆಯರು ಇಂದಿಗೂ ಎಲ್ಲಾ ಕ್ಷೇತ್ರಗಳಲ್ಲಿ ಪುರುಷರಷ್ಟು ಸಮಾನತೆಯನ್ನು ಹೊಂದಲು ಸಾಧ್ಯವಾಗಿರುವುದಿಲ್ಲ. ಶಿಕ್ಷಣ ಹಾಗೂ ಉದ್ಯೋಗ ಕ್ಷೇತ್ರದಲ್ಲಿ ಸಾಕಷ್ಟು ಪ್ರಗತಿ ಸಾಧಿಸಿದ್ದರೂ ರಾಜಕೀಯ ಕ್ಷೇತ್ರದಲ್ಲಿ ಇನ್ನೂ ಸಕ್ರಿಯವಾಗಿ ಪಾಲ್ಗೊಳ್ಳಲು ಸಾಧ್ಯವಾಗಿರುವುದಿಲ್ಲ. ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಬಲಪಡಿಸ ಬೇಕಾದರೆ ಒಟ್ಟು ಜನಸಂಖ್ಯೆಯಲ್ಲಿ ಅರ್ಧದಷ್ಟಿರುವ ಮಹಿಳೆಯರು ರಾಜಕೀಯ ಕ್ಷೇತ್ರದಲ್ಲಿ ಕಡ್ಡಾಯವಾಗಿ ಪಾಲ್ಗೊಳ್ಳುವಂತಾಗಬೇಕು. ಈ ರೀತಿಯ ಪಾಲ್ಗೊಳ್ಳುವಿಕೆಯಿಂದ ನಿರ್ಲಕ್ಷಿತ ಹಾಗೂ ತುಳಿತಕ್ಕೊಳಗಾದ ಮಹಿಳೆಯ ಸಬಲೀಕರಣವಾಗಲು ಸಾಧ್ಯ.

ಈ) <u>ಮಹಿಳೆಯರ ಶೈಕ್ಷಣಿಕ ಮಟ್ಟವನ್ನು ಹೆಚ್ಚಿಸುವುದು:</u> ಶಿಕ್ಷಣದ ಎಲ್ಲಾ ಹಂತಗಳಲ್ಲಿ ಹೆಣ್ಣು ಮಕ್ಕಳ ಶಾಲಾ ಬಿಡುವಿಕೆ ಪ್ರಮಾಣ ಕಡಿಮೆಗೊಳಿಸಬೇಕು, ಗ್ರಾಮೀಣ ಮಹಿಳೆಯರ ಸಾಕ್ಷರತಾ ಮಟ್ಟ ಹೆಚ್ಚಿಸಬೇಕು, ಗ್ರಾಮೀಣ ಹೆಣ್ಣು ಮಕ್ಕಳು ಲಭ್ಯವಿರುವ ಕಂಪ್ಯೂಟರ್ ಹಾಗೂ ಇನ್ನಿತರೆ ತಾಂತ್ರಿಕ ಕೋರ್ಸ್‌ಗಳು ಹಾಗೂ ಕೌಶಲ್ಯಗಳಲ್ಲಿ ಪರಿಣಾಮಕಾರಿಯಾಗಿ ತೊಡಗಿಸಿಕೊಳ್ಳುವಂತೆ ಮಾಡಬೇಕು.

~ ~ ~